# ಇನ್‌ಸ್ಟಾಗ್ರಾಂ ವ್ಯಾನಿಶ್ ಮೋಡ್!

■ ಶಶಿಕುಮಾರ್ ಸಿ.




ಫೋಟೊ ಹಂಚಿಕೊಳ್ಳಲೆಂದೇ ವಿಶೇಷವಾಗಿ ರೂಪಿಸಿದ ಇನ್‌ಸ್ಟಾಗ್ರಾಂ ಆ್ಯಪ್ ಈಚೆಗೆ 'ವ್ಯಾನಿಶ್ ಮೋಡ್' ಆಯ್ಕೆಯನ್ನು ತನ್ನ ಗ್ರಾಹಕರಿಗೆ ಪರಿಚಯಿಸಿದೆ. ವಾಟ್ಸ್‌ಆ್ಯಪ್‌ನಲ್ಲಿ ಈಚೆಗೆ ಪರಿಚಯಿಸಿದ್ದ ಡಿಸ್ ಅಪಿಯರಿಂಗ್ ಫೀಚರ್‌ನ ರೂಪಾಂತರ ಇದಾಗಿದ್ದು, ಇನ್‌ಸ್ಟಾಗ್ರಾಂನಲ್ಲೂ ಈ ಫೀಚರ್ ಅನ್ನು ಇನ್ನು ಮುಂದೆ ಬಳಕೆದಾರರು ಪಡೆಯಬಹುದು.

ಈ ಫೀಚರ್ ಅನ್ನು ಆನ್ ಮಾಡಿದರೆ ಬಳಕೆದಾರರ ಇನ್‌ಸ್ಟಾಗ್ರಾಂ ಖಾತೆಗೆ ಬರುವ ಸಂದೇಶಗಳನ್ನು ವೀಕ್ಷಿಸಿದ ಬಳಿಕ ತಾನಾಗಿಯೇ ಅವು ಕಣ್ಮರೆಯಾಗುತ್ತವೆ. ಈಗಾಗಲೇ ಚಾಲ್ತಿಯಲ್ಲಿರುವ ಈ ಫೀಚರ್ ಬಗ್ಗೆ ಸಾಕಷ್ಟು ಮಂದಿಗೆ ತಿಳಿದಿಲ್ಲ. ಈಗಾಗಿಯೇ ಆ್ಯಪ್‌ನ ವೀಕ್ಷಣೆಯ ನಡುವೇ 'ವ್ಯಾನಿಶ್ ಮೋಡ್ ಆನ್ ಮಾಡಲು ಸ್ವೈಪ್ ಮಾಡಿ' ಎಂಬ ಸೂಚನೆಯನ್ನು ಇನ್‌ಸ್ಟಾಗ್ರಾಂ ನೀಡುತ್ತದೆ. ಒಂದು ವೇಳೆ ನಿಮ್ಮ ಖಾತೆಯಲ್ಲಿ ಚಾಟ್‌ಗಳನ್ನು (ಸಂದೇಶಗಳನ್ನು) ಹಾಗೆಯೇ ಉಳಿಸಿಕೊಳ್ಳಲು ನೀವು ಬಯಸಿದ್ದಲ್ಲಿ ಈ ಆಯ್ಕೆಯನ್ನು ಆಫ್ ಮಾಡುವುದು ಕಡ್ಡಾಯ. ಇಲ್ಲವಾದಲ್ಲಿ ಚಾಟ್‌ಗಳು ಮಾಯವಾಗುತ್ತವೆ. ಈ ಆಯ್ಕೆಯನ್ನು ಪಡೆಯಲು ಮೊದಲು ನಿಮ್ಮ ಇನ್‌ಸ್ಟಾಗ್ರಾಂ ಆ್ಯಪ್ ಅನ್ನು ಅಪ್‌ಡೇಟ್ ಮಾಡಬೇಕು.

ವ್ಯಾನಿಶ್ ಮೋಡ್ ಸಕ್ರಿಯಗೊಳಿಸಿದ ಚಾಟ್‌ಗೆ ಹಿಂತಿರುಗಿದರೆ ಹಳೆಯ ಚಾಟ್‌ಗಳು ಅಥವಾ ಮೀಡಿಯಾ ಅಥವಾ ವಿಡಿಯೊಗಳನ್ನು ಸಹ ನೀವು ನೋಡಲು ಸಾಧ್ಯವಾಗುವುದಿಲ್ಲ. ಚಾಟ್‌ನಲ್ಲಿ ಎರಡು ವಿಧಾನಗಳ ನಡುವೆ ಟಾಗಲ್ ಮಾಡಬಹುದು. ಕೆಲವು ಸಂದೇಶಗಳು ಅಥವಾ ಫೋಟೊಗಳು ಅಥವಾ ವಿಡಿಯೊಗಳಿಗಾಗಿ ಈ ಆಯ್ಕೆ ಆನ್ ಮಾಡಬಹುದು. ಈ ಆಯ್ಕೆಯಿಂದ ಆಗುವ ಉಪಯೋಗವೆಂದರೆ, ಚಾಟ್‌ಗಳು, ಫೋಟೊಗಳು ಅಥವಾ ವಿಡಿಯೊಗಳನ್ನು ನೋಡಿದ ಮರುಕ್ಷಣವೇ ಅವು ಕಣ್ಮರೆಯಾಗುತ್ತವೆ.

ಯಾರ ಜೊತೆಗಿನ ಚಾಟ್, ಫೋಟೊ ಹಾಗೂ ವಿಡಿಯೊಗಳನ್ನು ವ್ಯಾನಿಶ್ ಮೋಡ್‌ಗೆ ಹಾಕಬಯಸುತ್ತೀರೋ ಅವರನ್ನು ಮುಂಚೆಯೇ ನೀವು ಸೆಲೆಕ್ಟ್ ಮಾಡಿಕೊಳ್ಳಬೇಕು. ಅವರು ನಿಮ್ಮ ಕಾಂಟ್ಯಾಕ್ಟ್‌ನಲ್ಲಿ ಇರಬೇಕು. ಜೊತೆಗೆ ವ್ಯಾನಿಶ್ ಮೋಡ್ ಬಳಕೆ ವೇಳೆ ಯಾರಾದರೂ ನಿಮ್ಮ ಚಾಟ್ ಅನ್ನು ಸ್ಕ್ರೀನ್ ಶಾಟ್ ತೆಗೆದರೆ ಅಥವಾ ನೀವು ಬೇರೊಬ್ಬರ ಚಾಟ್‌ನ ಸ್ಕ್ರೀನ್ ಶಾಟ್ ತೆಗೆದರೆ ಆ ಬಗ್ಗೆ ಇಬ್ಬರಿಗೂ ಎಚ್ಚರಿಕೆ ಸಂದೇಶ ರವಾನೆಯಾಗುತ್ತದೆ.

### ಆಯ್ಕೆ ಹೇಗೆ?

- ಆ್ಯಪ್ ಅನ್ನು ತೆರೆದು 'ವ್ಯಾನಿಶ್ ಮೋಡ್' ಸಕ್ರಿಯಗೊಳಿಸಲು ಬಯಸುವ ಚಾಟ್ ಅನ್ನು ತೆರೆಯಿರಿ
- ಚಾಟ್‌ನ ಕೊನೆಯಲ್ಲಿ ನೀವು 'ವ್ಯಾನಿಶ್ ಮೋಡ್ ಅನ್ನು ಆನ್ ಮಾಡಲು ಸ್ವೈಪ್ ಮಾಡಿ' ಎಂಬ ಸೂಚನೆ ಕಾಣಿಸುತ್ತದೆ.
- ನಂತರ ಅದನ್ನು ಮೇಲಕ್ಕೆ ಎಳೆದರೆ ಈ ಫೀಚರ್ ಸಕ್ರಿಯಗೊಳ್ಳುತ್ತದೆ. ವ್ಯಾನಿಶ್ ಮೋಡ್ ಅನ್ನು ಆಫ್ ಮಾಡಲು ಚಾಟ್‌ನ ಕೆಳಗಿನಿಂದ ಸ್ವೈಪ್ ಮಾಡಿ ನಂತರ ಚಾಟ್ ವಿಂಡೋದ ಮೇಲಿರುವ 'ಟರ್ನ್ ಆಫ್ ವ್ಯಾನಿಶ್ ಮೋಡ್' ಆಯ್ಕೆಯ ಮೇಲೆ ಕ್ಲಿಕ್ಕಿಸಿದರೆ ಆಫ್ ಆಗುತ್ತದೆ.

■

## ಹಳೆಯ ಐಫೋನ್‌ಗೂ ವಾಟ್ಸ್‌ಆ್ಯಪ್ ಬೆಂಬಲ

ಜನಪ್ರಿಯ ಇನ್‌ಸ್ಟಂಟ್ ಮೆಸೇಜಿಂಗ್ ಆ್ಯಪ್ ಆಗಿರುವ ವಾಟ್ಸ್‌ಆ್ಯಪ್‌ನ ಹೊಸ ಅಪ್‌ಡೇಟ್ ವರ್ಶನ್ ಲಭ್ಯವಿದ್ದು, ಇದರಲ್ಲಿ ಹಳೆಯ ಆವೃತ್ತಿಯ ಐಫೋನ್‌ಗೂ ತನ್ನ ಬೆಂಬಲ ಮುಂದುವರಿಸಲಿದೆ.

ವಾಟ್ಸ್‌ಆ್ಯಪ್ ಪ್ರತಿಬಾರಿಯೂ ಹಲವು ಫೀಚರ್‌ಗಳನ್ನು ತನ್ನ ಗ್ರಾಹಕರಿಗೆ ಒದಗಿಸುತ್ತದೆ. ಆದರೆ, ಅವುಗಳನ್ನು ಬಳಸಲು ಪೂರಕವಾದ ಓಎಸ್ (ಆಪರೇಟಿಂಗ್ ಸಿಸ್ಟಂ) ಮತ್ತು ಸ್ಮಾರ್ಟ್‌ಫೋನ್ ಸಾಮರ್ಥ್ಯದ ಬೆಂಬಲವೂ ಅಗತ್ಯವಾಗಿರುತ್ತದೆ. ಕೆಲವೊಂದು ಹೊಸ ಆಯ್ಕೆಗಳನ್ನು ಕೂಡ ಬಳಸಬೇಕಾದರೆ, ಅದಕ್ಕೆ ಓಎಸ್, ಫೋನ್ ಬೆಂಬಲ ಬೇಕೇಬೇಕು.



ವಾಟ್ಸ್‌ಆ್ಯಪ್ ಕಳೆದ ವರ್ಷದಲ್ಲಿ ಐಓಎಸ್ 8 ಮತ್ತು ಆಂಡ್ರಾಯ್ಡ್ 2.3.7 ಆವೃತ್ತಿಗೆ ತನ್ನ ಬೆಂಬಲವನ್ನು ನಿಲ್ಲಿಸಿತ್ತು.

ಅಲ್ಲದೆ, ಈ ಬಾರಿ ಐಓಎಸ್ 9 ಬಳಸುತ್ತಿರುವ ಆವೃತ್ತಿಗಳಿಗೆ ಕೂಡ ಬೆಂಬಲ ನಿಲ್ಲಿಸುವುದಾಗಿ ಹೇಳಿತ್ತು. ಇದರಿಂದ ಸಾಕಷ್ಟು ಮಂದಿ ಬಳಕೆದಾರರಿಗೆ ತೊಂದರೆಯಾಗಿತ್ತು. ಈ ಬಗ್ಗೆ ಮನಗಂಡಿರುವ ವಾಟ್ಸ್‌ಆ್ಯಪ್, ಐಓಎಸ್ 9 ಬಳಸುತ್ತಿರುವ ಐಫೋನ್ 4ಎಸ್, ಐಫೋನ್ 5, ಐಫೋನ್ 5ಸಿ, ಐಫೋನ್ 5ಎಸ್, ಐಫೋನ್ 6 ಮತ್ತು ಐಫೋನ್ 6 ಪ್ಲಸ್ ಫೋನ್‌ಗಳಿಗೆ ತನ್ನ ಬೆಂಬಲವನ್ನು ನೀಡುವುದಾಗಿ ತಿಳಿಸಿದೆ.

■